ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	135
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಡಾ: ಜೈಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	03.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಎಷ್ಟು ಜನರಿಗೆ ಬಿ.ಪಿ.ಎಲ್ ಕಾರ್ಡ್ ಗಳನ್ನು ಹಂಚಿಕೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿ 10,93,751 ಅಂತ್ಯೋದಯ(ಎಎವೈ) ಹಾಗೂ 1,16,08,196 ಆದ್ಯತಾ(ಪಿಹೆಚ್ ಹೆಚ್) ಪಡಿತರ ಚೀಟಿಗಳು ಇದ್ದು, ಒಟ್ಟು 1,27,01,947 ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ	ಈ ರೀತಿ ಏಕಾಏಕಿ ಕಾರ್ಡ್ ಗಳು ಹೆಚ್ಚಾಗಲು ಕಾರಣಗಳೇನು;	ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲು ಸರ್ಕಾರವು ನಿಗಧಿ ಮಾಡಿರುವ ಮಾನದಂಡಗಳನ್ವಯ ಆಹಾರ ನಿರೀಕ್ಷಕರುಗಳು ನಿಯಮಾನುಸಾರ ಸ್ಥಳ ಪರಿಶೀಲನೆ ಮಾಡಿ ವರದಿ ಮಾಡಿದ ನಂತರ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ. ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬಗಳ ವಿಭಜನೆಯಿಂದಾಗಿ ಪಡಿತರ ಚೀಟಿಗಳ ಸಂಖ್ಯೆ ಹೆಚ್ಚಾಗಿದೆ.
ಇ	ಬಡತನ ರೇಖೆಗಿಂತ ಹೆಚ್ಚಿಗೆ ಇರುವ ಜನರಿಗೂ ಬಿ.ಪಿ.ಎಲ್ ಕಾರ್ಡ್ ಗಳನ್ನು ಹಂಚಿಕೆ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ರೀತಿ ವ್ಯತ್ಯಾಸವಾಗಿರುವುದನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?	ರಾಜ್ಯದಲ್ಲಿ ಒಟ್ಟು 63,922 ಅನರ್ಹ/ನಕಲಿ ಪಡಿತರ ಚೀಟಿಗಳನ್ನು ಗುರುತಿಸಲಾಗಿದೆ. ಅನರ್ಹ/ನಕಲಿ ಪಡಿತರ ಚೀಟಿ ಹೊಂದಿದ್ದವರಿಂದ ಒಟ್ಟು ರೂ.96,27,960/- ದಂಡವನ್ನು ವಸೂಲಿ ಮಾಡಿ ಅನರ್ಹ/ನಕಲಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ. ಹಾಗೂ 43138 ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗಿದೆ. ಸರ್ಕಾರದ ಸಮುದ್ದೇಶದ ಕಾರ್ಯಕ್ರಮವಾದ ಅನ್ನ ಭಾಗ್ಯ ಯೋಜನೆಯನ್ನು ರಾಜ್ಯದ ನೈಜ ಬಡವರು ಉಚಿತವಾಗಿ ಆಹಾರ ಧಾನ್ಯ ಪಡೆದುಕೊಳ್ಳಲು ರೂಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅನರ್ಹ ಪಡಿತರ

		ಚೀಟಿದಾರರು ಈಗಾಗಲೇ ಆದ್ಯತಾ ಪಡಿತರ ಚೀಟಿಗಳನ್ನು (ಬಿಪಿಎಲ್) ಪಡೆದುಕೊಂಡಿದ್ದಲ್ಲಿ ಅಂತಹ ಕುಟುಂಬಗಳು ಸ್ವಯಂಪ್ರೇರಿತರಾಗಿ ತಾವು ಹೊಂದಿರುವ ಆದ್ಯತಾ ಪಡಿತರ ಚೀಟಿ (ಬಿಪಿಎಲ್)ಗಳನ್ನು ದಿನಾಂಕ: 30/04/2020ರ ಒಳಗಾಗಿ ಅದ್ಯರ್ಪಣ ಮಾಡುವಂತೆ ಮನವಿ ಮಾಡಲಾಗಿದೆ. 01.05. 2020 ರಿಂದ ಇಲಾಖೆ ನಕಲಿ/ಅನರ್ಹ ಪಡಿತರ ಚೀಟಿಗಳು ಕಂಡುಬಂದಲ್ಲಿ ಅಂತಹ ಪಡಿತರ ಕುಟುಂಬಗಳು ಪಡೆದುಕೊಂಡಿರುವ ಆಹಾರ ಧಾನ್ಯದ ಪ್ರಮಾಣಕ್ಕೆ ಅನುಗುಣವಾಗಿ ಮುಕ್ತ ಮಾರುಕಟ್ಟೆ ದರದಲ್ಲಿ ಅವರಿಂದ ದಂಡ ಶುಲ್ಕವನ್ನು ವಸೂಲಿ ಮಾಡಲಾಗುವುದು ಮತ್ತು ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.

ಆನಾಸ 40 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಅನುಬಂಧ - 1   LCQ - 135

ಜಿಲ್ಲಾವಾರು ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ ರದ್ದುಪಡಿಸಿರುವ ಮಾಹಿತಿ

ಕ್ರ.ಸಂ.	ಜಿಲ್ಲೆಯ ಹೆಸರು	ಒಟ್ಟು ಆದ್ಯತಾ ಪಡಿತರ ಚೀಟಿಗಳು	ರದ್ದು ಪಡಿಸಿರುವ ಒಟ್ಟು ಪಡಿತರ ಚೀಟಿಗಳು	ಶೇಕಡಾವಾರು ರದ್ದುಪಡಿಸಿದ ಪ.ಚೀಟಿ.	ಆದ್ಯತೇತರ ಪಡಿತರ ಚೀಟಿಯಾಗಿ ಪರಿವರ್ತಿಸಿರುವ ಪಡಿತರ ಚೀಟಿಗಳು	ಒಟ್ಟು ವಸೂಲಿಮಾಡಿ ಸರ್ಕಾರದ [illegible]
1	2	3	4	5	6	7
1	ಬೆಂಗಳೂರು ನಗರ	508485	8308	1.63	78	238411.00
2	ವಿಜಯಪುರ	509919	6297	1.23	5415	52930.00
3	ಚಿಕ್ಕಬಳ್ಳಾಪುರ	309531	3677	1.19	379	0.00
4	ಹಾಸನ	452935	4735	1.05	1323	161754.00
5	ಕೋಲಾರ	344689	2583	0.75	921	46212.00
6	ಹಾವೇರಿ	388934	2778	0.71	4535	185241.00
7	ಶಿವಮೊಗ್ಗ	392047	2712	0.69	240	694832.00
8	ಬೆಂಗಳೂರು ಉತ್ತರ	109377	699	0.64	0	0.00
9	ಧಾರವಾಡ	379593	2336	0.62	334	12000.00
10	ಚಿಕ್ಕಮಗಳೂರು	267615	1499	0.56	15	12720.00
11	ಬೆಂಗಳೂರು ಪೂರ್ವ	70929	385	0.54	0	0.00
12	ಬಾಗಲಕೋಟೆ	411952	1992	0.48	1676	106685.00
13	ಬಳ್ಳಾರಿ	594866	2663	0.45	3246	697138.00
14	ಕಲಬುರಗಿ	544296	2350	0.43	3718	0.00
15	ಬೆಂಗಳೂರು ದಕ್ಷಿಣ	113041	488	0.43	0	0.00
16	ಮೈಸೂರು	706751	2912	0.41	2981	0.00
17	ರಾಯಚೂರು	457632	1757	0.38	0	0.00
18	ಯಾದಗಿರಿ	259819	983	0.38	757	31100.00
19	ಗದಗ	253409	897	0.35	215	0.00
20	ದಾವಣಗೆರೆ	379934	1126	0.30	1577	25100.00
21	ದಕ್ಷಿಣ ಕನ್ನಡ	272300	792	0.29	6139	3013718.00
22	ಉತ್ತರ ಕನ್ನಡ	307917	891	0.29	1220	397335.00
23	ಬೆಳಗಾವಿ	1129818	3097	0.27	3669	3464457.00
24	ರಾಮನಗರ	299498	818	0.27	112	165961.00
25	ಬೆಂಗಳೂರು ಗ್ರಾಮಾಂತರ	231183	593	0.26	0	0.00
26	ತುಮಕೂರು	662582	1679	0.25	936	81784.00
27	ಕೊಪ್ಪಳ	328583	802	0.24	1531	0.00
28	ಉಡುಪಿ	190599	459	0.24	751	0.00
29	ಮಂಡ್ಯ	485291	1069	0.22	530	59766.00
30	ಕೊಡಗು	109940	234	0.21	18	0.00
31	ಬೆಂಗಳೂರು ಪಶ್ಚಿಮ	185205	391	0.21	3	180817.00
32	ಬೀದರ್	344946	696	0.20	128	0.00
33	ಚಾಮರಾಜನಗರ	291328	548	0.19	331	0.00
34	ಚಿತ್ರದುರ್ಗ	405507	676	0.17	360	0.00
	ಒಟ್ಟು	**12700451**	**63922**	**0.50**	**43138**	**9627961.00**